ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಕೋವಿಡ್-19

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡ ಟೈಮ್ಸ್     ದಿನಾಂಕ : DATE : 26/5/2020

# ಕೊರೋನಾ ಸಾವು ತಡೆ: ಬೆಂಗಳೂರು ದೇಶಕ್ಕೇ ಮಾದರಿ

## ಸಾವು ಕಡಿಮೆ: ಬೆಂಗಳೂರು, ಚೆನ್ನೈ ಆದರ್ಶ ನಗರ
## ಪ್ರಕರಣ ನಿರ್ವಹಣೆ: ಇಂದೋರ್, ಜೈಪುರ ಮಾದರಿ

**ನವದೆಹಲಿ:** ಕೊರೋನಾ ಸಮಸ್ಯೆಯನ್ನು ಯಶಸ್ವಿಯಾಗಿ ನಿಭಾಯಿಸಿದ ಕಾರಣಕ್ಕೆ ಬೆಂಗಳೂರು, ಚೆನ್ನೈ, ಇಂದೋರ್ ಹಾಗೂ ಜೈಪುರವನ್ನು ಕೇಂದ್ರ ಸರ್ಕಾರ ದೇಶಕ್ಕೇ ರೋಲ್ ಮಾಡೆಲ್ ನಗರಗಳು ಎಂದು ಗುರುತಿಸಿದೆ.

ಕೊರೋನಾ ಪೀಡಿತರ ಸಾವಿನ ಸಂಖ್ಯೆ ಹೆಚ್ಚದಂತೆ ಅತ್ಯುತ್ತಮವಾಗಿ ನಿಭಾಯಿಸಿದ ಕಾರಣಕ್ಕೆ ಬೆಂಗಳೂರು ಹಾಗೂ ತಮಿಳುನಾಡಿನ ಚೆನ್ನೈಯನ್ನು ಆದರ್ಶ ನಗರ ಎಂದು ಗುರುತಿಸಿದೆ. ಇನ್ನು, ಕೊರೋನಾ ಸೋಂಕು ದೊಡ್ಡ ಪ್ರಮಾಣದಲ್ಲಿ ಪತ್ತೆಯಾದರೂ ಸೃಜನಾತ್ಮಕವಾಗಿ ಅದನ್ನು ನಿಭಾಯಿಸಿದ ಕಾರಣಕ್ಕೆ ಮಧ್ಯಪ್ರದೇಶದ ಇಂದೋರ್ ಮತ್ತು ರಾಜಸ್ಥಾನದ ಜೈಪುರವನ್ನು ಆದರ್ಶನ ನಗರಗಳು ಎಂದು ಗುರುತಿಸಿದೆ. ಕೆಲ ದಿನಗಳ ಹಿಂದೆ ದೇಶದ ವಿವಿಧ ನಗರಪಾಲಿಕೆಗಳ ನಡುವೆ ಕೇಂದ್ರ ಸರ್ಕಾರ ಸಭೆ ಏರ್ಪಡಿಸಿತ್ತು. ಅದರಲ್ಲಿ ಎಲ್ಲಾ ನಗರಗಳೂ ಕೊರೋನಾ ನಿಯಂತ್ರಣದಲ್ಲಿ ತಮ್ಮ ಅನುಭವಗಳನ್ನು ಹಂಚಿಕೊಂಡಿದ್ದವು. ನಂತರ ಕೇಂದ್ರ ಸರ್ಕಾರವು ಕೊರೋನಾ ಸೋಂಕಿನಿಂದ ಹೆಚ್ಚು ಸಾವು ಸಂಭವಿಸದಂತೆ ಹೇಗೆ ಚಿಕಿತ್ಸೆ ನೀಡಬೇಕು ಎಂಬ ವಿಷಯದಲ್ಲಿ ಬೆಂಗಳೂರು ಮಾದರಿ ಅನುಸರಿಸಲು ಇತರೆ ನಗರಗಳಿಗೆ ಸೂಚಿಸಿದೆ.

